ತಲೆಗೇರಿಸಿಕೊಂಡನು.

'ಗೆಳೆಯ ರಾಜೇಶನನ್ನು ಭೇಟಿ ಮಾಡೋಣ' ಅಂತನಿಸಿದ್ದೇ, ಕಿಸೆಯಿಂದ ಮೊಬೈಲ್ ತೆಗೆದು ಅವನಿಗೆ ಫೋನಾಯಿಸಿದನು. ಅತ್ತಲಿಂದ ರಿಂಗಾದರೂ ಕರೆಯನ್ನು ಸ್ವೀಕರಿಸಲಿಲ್ಲ. 'ಬ್ಯೂಸಿ ಇದ್ದಾನಿರಬೇಕು' ಅಂದುಕೊಂಡು ಸಮಯವನ್ನು ಕಳೆಯುವ ಸಲುವಾಗಿ ಬೈಕನ್ನು ಗೊಮ್ಮಟಬೆಟ್ಟದೆಡೆ ಚಲಾಯಿಸಿದನು.

ಸುತ್ತಲೂ ಮೋಡ ದಟ್ಟವಾಗಿ ಆವರಿಸಿದ್ದರೂ ಮಳೆ ದೂಳಿನ ಕಣದಂತೆ ಸಣ್ಣಗೆ ಹನಿಯುತ್ತಿತ್ತು. ಎಲ್ಲರೂ ಆಗಲೋ ಈಗಲೋ ಜೋರಾದೊಂದು ಮಳೆ ಸುರಿಯಲಿದೆ ಎಂಬ ನಿರೀಕ್ಷೆಯಲ್ಲಿದ್ದಂತಿತ್ತು. ಹೊತ್ತು ಸರಿದರೂ ಜೋರಾಗಿ ಸುರಿಯುವ ಲಕ್ಷಣ ಕಾಣಿಸದೆ, ಅದು ಒಂದೇ ಗತಿಯಲ್ಲಿ ಹನಿಯುತ್ತಿತ್ತು.

ಕರುಣಾಕರ ಬೈಕನ್ನು ಬೆಟ್ಟದ ಬುಡದಲ್ಲಿ ನಿಲ್ಲಿಸಿ, ತಲೆಯಿಂದ ಹೆಲ್ಮೆಟ್ ತೆಗೆದು ಅದನ್ನು ಬೈಕ್‌ನ ಹ್ಯಾಂಡಲ್‌ಗೆ ಸಿಕ್ಕಿಸಿ ನಿಧಾನಕ್ಕೆ ಗೊಮ್ಮಟಬೆಟ್ಟದ ಮೆಟ್ಟಲನ್ನೇರಲಾರಂಭಿಸಿದನು. ಅಷ್ಟೇನು ಜನರಿಲ್ಲವಾದರೂ ಒಂದಷ್ಟು ಹತ್ತುವ, ಇಳಿಯುವ ಪ್ರವಾಸಿಗಳು, ವಿಹಾರಕ್ಕೆ ಬಂದವರು ಇದ್ದೇ ಇದ್ದರು. ಪರಿಚಯದ ಒಂದಿಬ್ಬರು ಕಂಡಾಗ ಅವರುಗಳಿಗೆ ನಮಸ್ಕರಿಸಿ ಮುಂದಡಿಯಿಟ್ಟದ್ದನು ಕರುಣಾಕರ.

ಬೆಟ್ಟವೇರಿ ಬಂದವನಿಗೆ ಒಂದು ಸಣ್ಣ ಆಯಾಸ. ಅಲ್ಲೇ ಸಮೀಪದಲ್ಲಿದ್ದ ದಂಡೆಯನ್ನೇರಿ ಕುಳಿತನು. ಹನಿಯುತ್ತಿದ್ದ ಮಳೆ ನಿಂತು ಮೋಡವೆಲ್ಲಾ ಚದುರಿ ಬಾನು ಪ್ರಶಾಂತವಾಯಿತು. ಮಳೆ ಬಂದೇ ಬಿಡುತ್ತದೆ ಎಂದು ಅಂದುಕೊಂಡಿದ್ದ ಜನಗಳ ನಿರೀಕ್ಷೆ ಹುಸಿಯಾಗಿತ್ತು. ದೂರದಲ್ಲಿ ಕೈ ಕೈ ಹಿಡಿದುಕೊಂಡು ನಡೆದು ಬರುತ್ತಿರುವ ಜೋಡಿಯನ್ನು ಕಂಡು ಕರುಣಾಕರನ ಕಣ್ಣುಗಳು ಕ್ಷಣ ಅಲ್ಲೇ ಸ್ಥಿರವಾದವು. ಅವರನ್ನು ನೋಡುವಾಗ ಇತ್ತೀಚೆಗಷ್ಟೇ ಮದುವೆಯಾದ ಹೊಸ ಜೋಡಿಯಂತೆ ಕಂಡರು. ಅವರು ಅವನು ಕುಳಿತಿದ್ದ ದಂಡೆಯ ಸಮೀಪದಿಂದಲೇ ಸರಿದು ಮುಂದೆ ಸಾಗಿದರು. ಕರುಣಾಕರನಿಗೆ ತಾನು ಮತ್ತು ಸುಲೋಚನಾ ಮೊದಲು ಭೇಟಿಯಾಗಿದ್ದು ಇದೇ ಗೊಮ್ಮಟಬೆಟ್ಟದಲ್ಲಿ ಎಂದು ನೆನಪಾದಾಗ ಮನಸ್ಸು ಕಹಿಯಾಯಿತು. ಅಷ್ಟರಲ್ಲಿ ಅವನ ಮೊಬೈಲ್ ಕೂಡಾ ರಿಂಗಣಿಸಲಾರಂಭಿಸಿತು. ಕಿಸೆಯಿಂದ ಮೊಬೈಲ್ ತೆಗೆದು ನೋಡಿದರೆ ಡಿಸ್‌ಪ್ಲೇ ಮೇಲೆ ರಾಜೇಶನ ಹೆಸರು ಮೂಡಿತ್ತು. ರಿಸೀವ್ ಮಾಡಿ ಕಿವಿಗಾನಿಸಿಕೊಂಡವನು, 'ಹಲೋ ರಾಜೇಶ ಎಲ್ಲಿದ್ಯೋ?' ಕೇಳಿದನು.

'ಇಲ್ಲೇ ಆನೆಕೆರೆ ಬಸ್ ಸ್ಟ್ಯಾಂಡ್ ಕಣೋ. ಡ್ಯೂಟಿ ಮುಗಿಸಿಕೊಂಡು ಈವಾಗಷ್ಟೇ ಬಂದೆ' ಅತ್ತಲಿಂದ ರಾಜೇಶನ ಮಾತುಗಳು ತೇಲಿಬಂದಿತ್ತು.

'ಏನಿಲ್ಲ, ಹಾಗೇ ಸುಮ್ನೆ ಫೋನ್ ಮಾಡ್ದೆ. ಮೀಟ್ ಮಾಡ್ದೆ ತುಂಬಾ ದಿನಗಳಾಯಿತಲ್ವಾ ಫ್ರೀ ಇದ್ರೆ ಮೀಟಾಗೋಣಾಂತ' ನುಡಿದನು.

'ಫ್ರೀ ಅಂತೇನಿಲ್ಲ. ಮೂರು ದಿನದಿಂದ ಕಂಟಿನ್ಯೂ ನಾಟಕ. ಮುಗಿಸಿಕೊಂಡು ಬರುವಾಗಲೇ ರಾತ್ರಿ ಮೂನ್ನಾಲ್ಕು ಗಂಟೆಯಾಗುತ್ತೆ. ಬೆಳಗ್ಗೆ ಮತ್ತೆ ಎದ್ದು ಒಂಬತ್ತು ಗಂಟೆಗೆ ಡ್ಯೂಟಿ ಜಾಯಿನ್ ಆಗ್ಬೇಕು. ಹಾಗಾಗಿ ಸರಿಯಾಗಿ ನಿದ್ರೆಯಿಲ್ಲ. ಎಲ್ಲಿದ್ದೀಯಾ ನೀನು?' ಕೇಳಿದನು ರಾಜೇಶ.

'ಇಲ್ಲೇ, ಗೊಮ್ಮಟಬೆಟ್ಟದ ಮೇಲಿದ್ದೇನೆ. ಬರ್‍ತೀಯಾ? ಇಲ್ಲ ಇವತ್ತೂ ನಾಟ್ಕ ಇದ್ಯಾ?'

'ಇರದೇ ಇರುತ್ತಾ... ಇವತ್ತು ಶನಿವಾರ ಬೇರೆ. ಶನಿವಾರ, ರವಿವಾರವಂತೂ ನಾಟಕ ಫಿಕ್ಸ್. ಆದ್ರೆ ಇವತ್ತು ನಾಟಕ ಹತ್ತು ಗಂಟೆ ಮೇಲೆ ಶುರುವಾಗೋದು ಅಂದಿದ್ದಾರೆ. ಬರ್‍ತೀನಿ ಇರು ಎರಡೇ ನಿಮಿಷ' ಎಂದ ರಾಜೇಶ ಕರೆಯನ್ನು ತುಂಡರಿಸಿದನು. ಕರುಣಾಕರ ಮೊಬೈಲನ್ನು ಜೇಬಿಗಿಳಿಸಿದವನು ರಾಜೇಶನ ದಾರಿಯನ್ನು ಕಾಯುತ್ತಾ ಕುಳಿತನು.

ಕರುಣಾಕರ ತಾನು ಕುಳಿತಿರುವ ದಂಡೆಯಿಂದ ಕೆಳಗೆ ನೋಡಿದರೆ ಮೆಟ್ಟಲನ್ನೇರಿ ಬರುವವರು ಕಾಣಿಸುತ್ತಿದ್ದರು. ಅಂತೆಯೇ ಆನೆಕೆರೆ ಬಸ್‌ಸ್ಟ್ಯಾಂಡ್‌ನಿಂದ ಗೊಮ್ಮಟಬೆಟ್ಟಕ್ಕೆ ಬೈಕ್‌ನಲ್ಲಿ ಬರಲು ನಿಮಿಷಗಳ ಹೊತ್ತು ಬೇಡವಾದ್ದರಿಂದ ಅರೆಗಳಿಗೆಯಲ್ಲೇ ಬೆಟ್ಟದ ಮೆಟ್ಟಿಲೇರಿ ಬರುತ್ತಿದ್ದ ರಾಜೇಶ ಕಾಣಿಸಿದನು. ಉದ್ದಕ್ಕೆ ಬಿಟ್ಟಿದ್ದ ಕೂದಲನ್ನು ಅವನು ಒಟ್ಟುಸೇರಿಸಿ ಹಿಂದಕ್ಕೆ ಜುಟ್ಟು ಕಟ್ಟಿಕೊಂಡಿದ್ದು, ಮೆಟ್ಟಿಲೇರಿ ಬರುತ್ತಿದ್ದ ಲಯಕ್ಕೆ ತಕ್ಕಂತೆ ಅದು ಕುಣಿಯುತ್ತಿತ್ತು. ಕೆಳಗಿನಿಂದಲೇ ಕರುಣಾಕರನನ್ನು ಕಂಡು ಕೈ ಎತ್ತಿದನು ರಾಜೇಶ. ಕರುಣಾಕರನೂ ಕೂಡಾ ಅವನೆಡೆಗೆ ಕೈ ಎತ್ತಿ ತೋರಿದವನು, ಅವನನ್ನೇ ದಿಟ್ಟಿಸಿ ನೋಡಿದನು. ಬೆಳ್ಳಗಿನ ಮುಖದಲ್ಲಿ ಗಡ್ಡ-ಮೀಸೆಗಳಿಲ್ಲ.